

## ಜಂಗಲ್ ಥೀಮ್ ಮಾಸ್ಕ್

ಪುಟಾಣಿಗಳನ್ನು ಆಕರ್ಷಿಸಲೆಂದೇ ಅಧಿರ ವನ್ಯಜೀವಿಗಳ ಥೀಮ್ ಇಟ್ಟುಕೊಂಡು ಮಾಸ್ಕ್ ಅನ್ನು ಹೊರತಂದಿದೆ. ಶುದ್ಧ ಹತ್ತಿಯಿಂದ ಬಟ್ಟೆಯಿಂದ ತಯಾರಿಸಿದ ಈ ಮಾಸ್ಕ್‌ಗಳು ಮಕ್ಕಳಿಗೆ ಕೋವಿಡ್‌ನಿಂದ ಸಂಪೂರ್ಣ ಸುರಕ್ಷೆ ನೀಡುವಂತಿವೆ. ದೊಡ್ಡವರಿಗೂ ಇದೇ ಥೀಮ್‌ನ ಸುರಕ್ಷಿತ ಮಾಸ್ಕ್‌ಗಳನ್ನೂ ಅಧಿರ ತಯಾರಿಸಿದ್ದು ಹೊರಗೆ ಹೋಗುವಾಗ ಧರಿಸಲು ಸ್ಟೈಲಿಷ್ ಆಗಿಯೂ ಕಾಣುತ್ತದೆ.

'ಅಧಿಕ ಸುರಕ್ಷತೆ ನೀಡಲು ಈ ಮಾಸ್ಕ್ ತಯಾರಿಸುವ ಮುನ್ನವೇ ಬಟ್ಟೆಯನ್ನು ಒಗೆದು ಚೆನ್ನಾಗಿ ಒಣಗಿಸಿ ಸ್ಯಾನಿಟೈಸ್ ಮಾಡಿಯೇ ತಯಾರಿಸಲಾಗಿದೆ. ಬಳಸಿದ ಬಳಿಕ ಇದನ್ನು ಮತ್ತೆ ಒಗೆದು ಉಪಯೋಗಿಸಬಹುದು. ಬಣ್ಣ, ಪ್ರಿಂಟ್ ಯಾವುದೂ ಮಾಸುವುದಿಲ್ಲ. ಹೆಚ್ಚು ಬಾಳಿಕೆಯೂ ಬರುವಂತಿದೆ' ಎನ್ನುತ್ತಾರೆ ಅಧಿರಾ ಇನ್‌ಮೇಟ್ಸ್‌ನ ಸಂಸ್ಥಾಪಕಿ ದೀಪಾ ಕುಮಾರ್.

ಮಕ್ಕಳಿಗೆ ಇದು ಪ್ರಾಣಿಗಳೊಂದಿಗೆ ಇದ್ದ ಅನುಭವ ನೀಡಲಿದೆ. ಫ್ಯಾಷನಬಲ್ ವಿನ್ಯಾಸ ಮಕ್ಕಳನ್ನು ಸೆಳೆಯಲಿದೆ. ಮಾಸ್ಕ್ ಮೇಲೆ 'ಗೋ ಕೊರೊನಾ ಗೋ' ಎಂಬ ಪ್ರಿಂಟ್ ಹಾಕಲಾಗಿದ್ದು, ಈ ಕೊರೊನಾ ವೈರಸ್ ಬಗ್ಗೆ ಜಾಗೃತಿಯನ್ನೂ ಮೂಡಿಸುವಂತಿದೆ.

ಮಾಸ್ಕ್ ಕಟ್ಟಿಕೊಳ್ಳುವುದು ಈಗ ಅವಶ್ಯ ಹಾಗೂ ಅನಿವಾರ್ಯವಾಗಿದೆ.

ಬದಲಾವಣೆಗಳಿಗೆ ಚಿಕ್ಕ ಮಕ್ಕಳನ್ನು ಒಪ್ಪಿಸುವುದು ಸ್ವಲ್ಪ ಕಷ್ಟದ ಕೆಲಸನೇ. ಸ್ವಲ್ಪ ದೊಡ್ಡ ಮಕ್ಕಳಾದರೆ ಏನೋ ಹೇಳಿ ಅವರನ್ನು ಒಪ್ಪಿಸಬಹುದು. ಈ 3ರಿಂದ 10 ವರ್ಷದ ಮಕ್ಕಳನ್ನು ಒಪ್ಪಿಸುವುದು ತುಸು ಕಷ್ಟದ ಕೆಲಸವೆನ್ನಬಹುದು. ಮುಖಕ್ಕೆ ಮಾಸ್ಕ್ ಹಾಕಿದರೆ ಅದು ಹೇಗೆ ಇದೆ ಎಂದು ತೆಗೆದು ನೋಡುವುದು. ಜತೆಗೆ ಇದು ಬೇಡ ಎಂದು ಕಿತ್ತು ಬಿಸಾಕುವುದು ಮಾಡುತ್ತಾ ಇರುತ್ತಾರೆ. ಹಾಗಂತ ಮಾಸ್ಕ್ ಹಾಕದೇ ಇರುವುದಕ್ಕೆ ಆಗುವುದಿಲ್ಲ. ಮಕ್ಕಳಿಗಾಗಿಯೇ ಇಂದು ಮಾರುಕಟ್ಟೆಯಲ್ಲಿ ಸಾಕಷ್ಟು ಬಗೆಯ ಮಾಸ್ಕ್‌ಗಳು ಬಂದಿವೆ. ಅವರ ಇಷ್ಟದ ಕಾರ್ಟೂನ್ ಕ್ಯಾರೆಕ್ಟರ್‌ಗಳು ಆ ಮಾಸ್ಕ್ ನ ಮೇಲೆ ರಾರಾಜಿಸುತ್ತಿವೆ. ಸೂಪರ್ ಹೀರೊ, ಟೆಡ್ಡಿ ಕ್ಯಾರೆಕ್ಟರ್, ಡಿಸ್ನಿ ಕ್ಯಾರೆಕ್ಟರ್ ಇದರ ಜತೆಗೆ ಬಣ್ಣ ಬಣ್ಣದ ಮಾಸ್ಕ್‌ಗಳು ಕೂಡ ಮಾರುಕಟ್ಟೆಯಲ್ಲಿವೆ. ಒಂದೇ ಉಪಯೋಗಿಸಿ ಬೇಜಾರು ಅನ್ನುವ ಮಕ್ಕಳಿಗೆ ವಿಭಿನ್ನ ಬಗೆಯ ಮಾಸ್ಕ್ ಗಳು ಕೂಡ ಲಭ್ಯವಿದೆ. ಹೀಗಾಗಿ ಸ್ವಲ್ಪ ಮಟ್ಟಿಗೆ ತಾಯಂದಿರು ನಿರಾಳವಾಗಬಹುದು. ಇನ್ನು ಕ್ರಾಫ್ಟ್ ಬಗ್ಗೆ ನಿಮಗೆ ಗೊತ್ತಿದ್ದರೆ ಮನೆಯಲ್ಲಿಯೇ ನೀವೇ ಚೆಂದವಾದ ಚಿತ್ರ ಬಿಡಿಸಿ ಮಾಸ್ಕ್ ತಯಾರಿಸಿ ಮಕ್ಕಳಿಗೆ ಕೊಡಬಹುದು. ಇದರಿಂದ ಖರ್ಚು ಉಳಿಯುತ್ತೆ ಮಕ್ಕಳಿಗೂ ಖುಷಿಯಾಗುತ್ತೆ.

### ಮಾಸ್ಕ್‌ನ ಇತಿಹಾಸ ಕೆದಕಿದಾಗ...

ಮೊದಲೆಲ್ಲಾ ಮಾಸ್ಕ್ ಅನ್ನು ಡಾಕ್ಟರ್, ಆಸ್ಪತ್ರೆಯ ಸಿಬ್ಬಂದಿಗಳು, ಯಾವುದಾದರೂ ಆಪರೇಷನ್ ಆಗಿರುವ ರೋಗಿಗಳು ಹಾಕಿಕೊಂಡು ಇರುವುದನ್ನು ನಾವು ನೋಡಿರುತ್ತೇವೆ. ಆದರೆ ಈಗ ಇದು ನಮ್ಮ ದೈನಂದಿನ ಜೀವನದ ಒಂದು ಭಾಗವಾಗಿ ಬಿಟ್ಟಿದೆ. ಕರವಸ್ತ್ರವನ್ನಾದರೂ ಮರೆಯಬಹುದು ಆದರೆ ಮಾಸ್ಕ್ ಮರೆಯುವ ಹಾಗಿಲ್ಲದಂತಾಗಿದೆ. ಯಾರದ್ದಾದರೂ ಎಂಜಲು, ಸೀನು, ಕೆಮ್ಮುವಿನ ಮೂಲಕ ವೈರಾಣುಗಳು ನಮ್ಮ ದೇಹವನ್ನು ಪ್ರವೇಶಿಸದಂತೆ ಈ ಮಾಸ್ಕ್ ತಡೆಯುತ್ತದೆ ಎಂಬ ಕಾರಣಕ್ಕಾಗಿ ಇದನ್ನು ಉಪಯೋಗಿಸುತ್ತೇವೆ. ಇಟಾಲಿಯನ್ ಮೂಲದಿಂದ ಹುಟ್ಟಿಕೊಂಡ ಈ ಮಾಸ್ಕ್ ಎಂಬ ಪದಕ್ಕೆ ಮುಖವಾಡ ಎಂಬ ಅರ್ಥವಿದೆ. ಹಿಂದಿನ ಕಾಲದಲ್ಲಿ ಮಾಸ್ಕ್‌ಗಳನ್ನು ಅಲಂಕಾರಕ್ಕಾಗಿ, ಯುದ್ಧದ ಸಂದರ್ಭದಲ್ಲಿ, ಉತ್ಸವಗಳಲ್ಲಿ ಬಳಸುತ್ತಿದ್ದರು. ಹಾಗೇ ಮರದಿಂದ, ಚರ್ಮದಿಂದಲೂ ಈ ಮಾಸ್ಕ್‌ಗಳನ್ನು ತಯಾರಿಸುತ್ತಿದ್ದರಂತೆ. ಅತ್ಯಂತ ಪುರಾತನವಾದ ಮಾಸ್ಕ್‌ಗಳು ಜೆರುಸಲೇಂ ಹಾಗೂ ಪ್ಯಾರಿಸ್‌ನ ವಸ್ತುಸಂಗ್ರಹಾಲಯದಲ್ಲಿವೆ. ಧೂಳು, ವೈರಸ್‌ಗಳು ದೇಹವನ್ನು ಸೇರದಂತೆ ಕಾಪಾಡಿಕೊಳ್ಳಲು ಇದನ್ನು ಬಳಸಲಾಗುತ್ತಿದೆ. ಬೈಕ್ ಸವಾರರು, ವೈದ್ಯರು, ದಾದಿಯರು ಹೆಚ್ಚು ಮಾಸ್ಕ್ ಉಪಯೋಗಿಸುವುದನ್ನು ನಾವು ನೋಡಿರುತ್ತೇವೆ.

### ಮಕ್ಕಳನ್ನು ರಂಜಿಸುವ ಮಾಸ್ಕ್

ಈಗಂತೂ ಹೊರಗಡೆ ಮಾರುಕಟ್ಟೆಗೆ ಹೋಗಿ ಮಾಸ್ಕ್ ತರುವವರಿಗಿಂತ ಆನ್‌ಲೈನ್‌ನಲ್ಲಿ ಆರ್ಡರ್ ಮಾಡುವವರೇ ಜಾಸ್ತಿ. ಇಲ್ಲಿ ತಮಗೆ ಬೇಕಾದ ರೀತಿಯ, ಬ್ರಾಂಡ್ ನ ಮಾಸ್ಕ್‌ಗಳು ಸಿಗುವುದರಿಂದ ಕೆಲವರು ಇದರ ಮೊರೆ ಹೋಗುತ್ತಿದ್ದಾರೆ. ಮೊದಲೆಲ್ಲಾ 10–20 ರೂಪಾಯಿಗೆ ಸಿಗುತ್ತಿದ್ದ ಮಾಸ್ಕ್ ಈಗ ಬೇರೆ ಬೇರೆ ವಿನ್ಯಾಸದಲ್ಲಿ ಬಂದು ಬೆಲೆ ಕೂಡ ಹೆಚ್ಚಿಸಿಕೊಂಡಿದೆ. ದೊಡ್ಡವರು ಕೂಡ ಈಗ ಹೈಟೆಕ್ ಮಾಸ್ಕ್‌ಗಳನ್ನೇ ಬಳಸಲು ಶುರುಮಾಡುತ್ತಿದ್ದಾರೆ. ಮಕ್ಕಳಿಗೆಂದೇ ಮಿಕ್ಕಿ ಆ್ಯಂಡ್ ಮಿನ್ನಿ ಫೇಸ್ ಮಾಸ್ಕ್, ಸ್ಟಾರ್ ವಾರ್ ಮಾಸ್ಕ್, ಪಿಕ್ಸಾರ್, ಡಿಸ್ನಿ ಪ್ರಿನ್ಸೆಸ್ ಆಂಡ್ ಫ್ರೋಸನ್ ಮಾಸ್ಕ್, ಮಾರ್ವಲ್ ಕ್ಯಾರೆಕ್ಟರ್‌ನ ಮಾಸ್ಕ್‌ಗಳು ಮಕ್ಕಳಿಗೆಂದೇ ಇವೆ. ಇನ್ನು ಡೈನೋಸರ್ ಸ್ಟೈಲ್ ರೀತಿಯ ಮಾಸ್ಕ್‌ಗಳಿದ್ದು ಈ ತರಹದ ಮಾಸ್ಕ್ ನೋಡುವುದಕ್ಕೆ ಒಂದು ರೀತಿ ಫನ್ನಿ ಆಗಿದೆ. ಡೈನೋಸರ್ ನಂತಹ ಕ್ಯಾರೆಕ್ಟರ್ ಇಷ್ಟಪಡುವ ಮಕ್ಕಳಿಗೆ ಇದು ತುಂಬಾ ಇಷ್ಟವಾಗುತ್ತೆ. ಇದನ್ನು ಬಳಸುವುದರಿಂದ ಮಕ್ಕಳಿಗೂ ಮುದ ನೀಡುತ್ತೆ ಜತೆಗೆ ಸುರಕ್ಷಿತರಾಗಿಯೂ ಇರಬಹುದು.

ಹಾಗೇ ಆರ್ಗಾನಿಕ್ ಕಾಟನ್‌ನಿಂದ ಮಾಡಲಾದ ಎಂಬ್ರಾಯಿಡರಿ ಮಾಸ್ಕ್ ಕೂಡ ಇದೆ. ಕೆಲವು ಫ್ಯಾಬ್ರಿಕ್‌ನಿಂದ ಮಕ್ಕಳಿಗೆ ಅಲರ್ಜಿಯಂತಹ ಸಮಸ್ಯೆ ಎದುರಿಸುತ್ತಿರುವ ಕಾಣಿಸಿಕೊಳ್ಳುತ್ತದೆ. ಅಂತಹ ಮಕ್ಕಳಿಗಾಗಿ ಇದು ಚೆನ್ನಾಗಿರುತ್ತದೆ. ■



## ಮಾಸ್ಕ್ ಬಳಕೆ ಹೀಗಿರಲಿ

ಎಲ್ಲಾ ಮಕ್ಕಳು ಈ ಮಾಸ್ಕ್ ಹಾಕುವುದಕ್ಕೆ ಒಪ್ಪುವುದಿಲ್ಲ. ಕೆಲವು ಮಕ್ಕಳಿಗೆ ಮುಖದ ಮೇಲೆ ಇದನ್ನು ಹಾಕಿಕೊಳ್ಳುವುದೇ ದೊಡ್ಡ ಹಿಂಸೆ. ಮಕ್ಕಳ ಉಪಯೋಗಿಸುವ ಮಾಸ್ಕ್ ಮೇಲೆ ಮಾರ್ಕರ್‌ನಿಂದ ಅವರಿಗಿಷ್ಟವಾಗುವ ಚಿತ್ರಬಿಡಿಸುವುದಕ್ಕೆ ಅಥವಾ ಸ್ಮೈಲಿ ರೀತಿಯ ಸ್ಟಿಕರ್ ಅಂಟಿಸುವುದಕ್ಕೆ ಹೇಳಿ ಇದರಿಂದ ಮಕ್ಕಳಿಗೆ ಮಾಸ್ಕ್ ಮೇಲಿನ ಭಯ ಕಡಿಮೆಯಾಗುತ್ತದೆ. ಮಕ್ಕಳು ಹೊರಗಡೆ ಹೋದಾಗ ಮಾಸ್ಕ್ ಅನ್ನು ಕಳೆದುಬರುವುದು ಹೆಚ್ಚು. ಹಾಗಾಗಿ ಸಾಧ್ಯವಾದಷ್ಟು ಮನೆಯಲ್ಲಿಯೇ ಒಂದಷ್ಟು ಮಾಸ್ಕ್ ತಯಾರಿಸುವುದನ್ನು ಕಲಿತುಕೊಳ್ಳಿ. ಒಳ್ಳೆಯ ಹತ್ತಿ ಬಟ್ಟೆ ಉಪಯೋಗಿಸಿ ಮಾಡಿದರೆ ಒಳ್ಳೆಯದು.